ದಿನಾಂಕಃ 05-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ- 2, 4 ರಿಂದ 10 ನೇ ಪ್ರತಿವಾದಿಯರ ಪರವಾಗಿ ಶ್ರೀ.ಆರ್.ಎಸ್.ಕೆ. ವಕೀಲರಿಂದಃ-**

ಈ ದಾವೆಯನ್ನು ಹಾಕಲು ನನ್ನ ತಂದೆಯವರು ಮಾಹಿತಿ ನೀಡಿರುತ್ತಾರೆ. ನಾನು ಕೂಡ ಮಾಹಿತಿ ಕೊಟ್ಟಿದ್ದೇನೆ. ಈ ದಾವೆಯನ್ನು ಹಾಕುವ ಮೊದಲು ನನ್ನ ತಂದೆ ಓ.ಎಸ್.156/2013 ಮತ್ತು ಓ.ಎಸ್.18/2018 ರಲ್ಲಿ ಎರಡು ದಾವೆ ಹಾಕಿದ್ದರು ಎಂದರೆ ಸರಿ. 2013 ರಲ್ಲಿ ನನ್ನ ತಂದೆಯ ವಯಸ್ಸು ಸುಮಾರು 40-45 ವರ್ಷ ವಯಸ್ಸು ಇತ್ತು ಎಂದರೆ ಸರಿ. ಆ ದಾವೆ ಹಾಕಿದಾಗ ನನ್ನ ತಂದೆ ಪ್ರತಿ ವಾಯಿದೆಗೆ ನ್ಯಾಯಾಲಯಕ್ಕೆ ಬಂದು ಹೋಗುತ್ತಿದ್ದರು ಎಂದರೆ ಸರಿ. ಈ ದಾವೆಯಲ್ಲಿ ವಿಚಾರಣೆ ಪ್ರಾರಂಭವಾಗುವ ತನಕ ನನ್ನ ತಂದೆ ಪ್ರತಿ ವಾಯಿದೆಗೆ ಬರುತ್ತಿದ್ದರು ಎಂದರೆ ಸರಿ. ವಿಚಾರಣೆ ಪ್ರಾರಂಭವಾದ ನಂತರ ನನ್ನ ತಂದೆ ಈಗ ನ್ಯಾಯಾಲಯಕ್ಕೆ ಬರುತ್ತಿಲ್ಲ ಎಂದರೆ ಸರಿ. ಕಾರಣ ಅವರಿಗೆ ಕನ್ನಡ ಬರುವುದಿಲ್ಲ. ನಮ್ಮ ಅರ್ಜಿಯಲ್ಲಿ ನನ್ನ ತಂದೆಗೆ ಕನ್ನಡ ಬರುವುದಿಲ್ಲ ಎಂಬ ಒಂದೇ ಕಾರಣವನ್ನು ಹಾಕಿದ್ದೇನೆ ಬೇರೆ ಯಾವುದೇ ಕಾರಣ ತೋರಿಸಿಲ್ಲ. ನನ್ನ ತಂದೆಗೆ ಬುದ್ದಿ ಜ್ಞಾನ ಚೆನ್ನಾಗಿದೆ. ಅವರಿಗೆ ಓಡಾಡಲು ಶಕ್ತಿ ಇದೆ ಎಂದರೆ ಸರಿ. 2 ಮತ್ತು 3 ನೇ ವಾದಿಯರು ಕೂಡ ಆರೋಗ್ಯವಾಗಿ ಓಡಾಡಿಕೊಂಡು ಚೆನ್ನಾಗಿದ್ದಾರೆ ಎಂದರೆ ಸರಿ.

ನನ್ನ ಜನ್ಮ ದಿನಾಂಕಃ 25-08-1996. ನಾನು ಬಿ.ಎ. ಪದವಿದರ. ನಾನು ಮಧುಗಿರಿಯಲ್ಲೇ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಮೊದಲಿನಿಂದ ಇಲ್ಲಿಯ ತನಕ ದೊಡ್ಡದಾಳವಾಟದಲ್ಲೇ ವಾಸ ಮಾಡುತ್ತಿದ್ದೇನೆ ಎಂದರೆ ಸರಿ. ನಾನು 2 ಮತ್ತು 3 ನೇ ಪ್ರತಿವಾದಿಯರನ್ನು ನೋಡಿದ್ದೇನೆ. ನನ್ನ ಮತ್ತು ಅವರ ನಡುವೆ ಯಾವುದೇ ವೈಮನಸ್ಸು ಇಲ್ಲ, ನಾವು ಚೆನ್ನಾಗಿದ್ದೇವೆ. ನನ್ನ ಅಜ್ಜಿ ದಾಳಮ್ಮ ಹಾಗೂ 2 ಮತ್ತು 3 ನೇ ಪ್ರತಿವಾದಿಯರು ಎಚ್.ನರಸಿಂಹಪ್ಪ ಹಾಗೂ ನರಸಮ್ಮನವರ ಮಕ್ಕಳು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಈ ಬಗ್ಗೆ ಏನಾದರೂ ದಾಖಲೆ ಇದೆಯಾ ಎಂದರೆ ಇಲ್ಲ. 2 ನೇ ಪ್ರತಿವಾದಿ ನಾಗಮ್ಮ ಈಗಲೂ ಜೀವಂತವಿದ್ದಾರೆ ಎಂದರೆ ಸರಿ. ಅವರಿಗೆ ಬುದ್ದಿ ಜ್ಞಾನ ಚೆನ್ನಾಗಿದೆ ಎಂದರೆ ಸರಿ. ನಾನು ಹಾಜರುಪಡಿಸಿದ ನಿಪಿ.5 ವಂಶವೃಕ್ಷವನ್ನು ನಾನೇ ಹೇಳಿ ಬರೆಸಿ ಹಾಕಿದ್ದೇನೆ ಎಂದರೆ ಸರಿ. ನಿಪಿ.5 ಕ್ಕೆ ಸಂಬಂಧಿಸಿದಂತೆ ಕಂದಾಯ ಇಲಾಖೆಯಿಂದ ಚೆಕ್ ಲಿಸ್ಟ್ ತೆಗೆಸಿ ಹಾಕಲು ಏನಾದರೂ ತೊಂದರೆಯಿತ್ತಾ ಎಂದರೆ ಇಲ್ಲ. ನಾನು ಹಾಜರುಪಡಿಸಿದ ವಂಶವೃಕ್ಷದ ಆಧಾರದ ಮೇಲೆ ಎಚ್.ನರಸಿಂಹಪ್ಪನವರು ನನ್ನ ಮುತ್ತಾತ ಎಂದು ಹೇಳುತ್ತಿದ್ದೇನೆ ಎಂದರೆ ಸರಿ.

2 ನೇ ಪ್ರತಿವಾದಿಯ ಗಂಡ ಹನುಮಂತಪ್ಪ ಈಗ ಬದುಕಿದ್ದಾರೆ ಎಂದರೆ ಸರಿ. ಹನುಮಂತಪ್ಪನವರ ಅಣ್ಣ ತಿಪ್ಪಣ್ಣ ಎಂದರೆ ಗೊತ್ತಿಲ್ಲ. ಸದರಿ ಹನುಮಂತಪ್ಪ ಮತ್ತು

ತಿಪ್ಪಣ್ಣನವರು ದಿನಾಂಕಃ 26-11-1969 ರಲ್ಲಿ ದಾವಾ ಐಟಂ ನಂಬರ್ 1 ಮತ್ತು 2 ರ ಆಸ್ತಿಯನ್ನು ಖರೀದಿಸಿದ್ದಾರೆ ಎಂದರೆ ಸರಿ. ತಿಪ್ಪಣ್ಣ ಮೃತ ಪಟ್ಟ ನಂತರ ಅವರ ಹೆಂಡತಿ ಆದಮ್ಮ ಹಾಗೂ ಹನಮಂತಪ್ಪ ಸೇರಿ 1985 ರಲ್ಲಿ ಈ ಎರಡು ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ವಿಭಾಗದಂತೆ ಈ ಎರಡು ಆಸ್ತಿಗಳು ಹನುಮಂತಪ್ಪನ ಹಿಸ್ಸೆಗೆ ಬಂತು ಎಂದರೆ ಸರಿ. ಅದೇ ಪ್ರಕಾರ ಎಂ.ಆರ್.29/1994-95 ರಂತೆ ಅವರ ಹೆಸರಿಗೆ ಖಾತೆ ಪಹಣಿಯಾಗಿದೆ ಎಂದರೆ ಸರಿ. ನಂತರ ದಿನಾಂಕಃ 11-04-2008 ರಂದು ಹನುಮಂತಪ್ಪನವರು ದಾವಾ ಐಟಂ ನಂಬರ್ 2 ರ ಆಸ್ತಿಯನ್ನು ಅವರ ಹೆಂಡತಿಯಾದ 2 ನೇ ಪ್ರತಿವಾದಿಗೆ ನೋಂದಾಯಿತ ದಾನ ಪತ್ರದ ಮೂಲಕ ನೀಡಿದ್ದಾರೆ ಎಂದರೆ ಸರಿ . ಸದರಿ ದಾನ ಪತ್ರದ ಆಧಾರದ ಮೇಲೆ ಈ ಎರಡು ಆಸ್ತಿಗಳ ಖಾತೆಯು ಎಂ.ಆರ್.22/2007-08 ರಂತೆ 2 ನೇ ಪ್ರತಿವಾದಿಯ ಹೆಸರಿಗೆ ಖಾತೆ ಪಹಣಿ ಬರುತ್ತಿದೆ ಎಂದರೆ ಸರಿ. ಹನುಮಂತಪ್ಪನ ಅಣ್ಣನ ಹೆಂಡತಿಯಾದ ಆದಮ್ಮರವರು ಸದರಿ ಎಂ.ಆರ್.ನ್ನು ಪ್ರಶ್ನಿಸಿ ಎ.ಸಿ. ನ್ಯಾಯಾಲಯದಲ್ಲಿ ಆಪೀಲು ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಆಪೀಲು ದಿನಾಂಕಃ 11-01-2016 ರಲ್ಲಿ ವಜಾ ಆಗಿದೆ ಎಂದರೆ ಗೊತ್ತಿಲ್ಲ.

ಆದಮ್ಮ ಮತ್ತು ಅವರ ಮಕ್ಕಳು ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್.488/2018 ರಲ್ಲಿ 2 ನೇ ಪ್ರತಿವಾದಿ ಹಾಗೂ ಅವರ ಗಂಡನ ವಿರುದ್ಧ ಹಿಸ್ಸೆ

ದಾವೆ ಹಾಕಿದ್ದಾರೆ ಎಂದರೆ ಸರಿ. ಸದರಿ ದಾವೆಯು ವಿಚಾರಣೆಗೆ ಬಾಕಿ ಇದೆ ಎಂದರೆ ಸರಿ. ದಾವಾ ಆಸ್ತಿಯು 2 ನೇ ಪ್ರತಿವಾದಿ ಹಾಗೂ ಅವರ ಗಂಡನಿಗೆ ಹೇಗೆ ಬಂತು ಎಂಬ ವಿಷಯ ನನಗೆ ಮೊದಲಿನಿಂದ ಗೊತ್ತಿದೆ ಎಂದರೆ ಸರಿಯಲ್ಲ. ಆದರೆ ಈ ದಾವೆ ಹಾಕಿದ ನಂತರ ತಿಳಿದಿರುತ್ತದೆ.

ದಾವಾ ಐಟಂ ನಂಬರ್ 1 ಮತ್ತು 2 ರಲ್ಲಿ ಯಾವ ರೀತಿ ಹಕ್ಕು ಇದೆ ಎಂದು ಹಿಸ್ಸೆ ಕೇಳುತ್ತಿದ್ದೀರಾ ಎಂದರೆ ಸಾಕ್ಷಿಯು ನನ್ನ ಅಜ್ಜಿ ನರಸಮ್ಮನವರು ಅವರ ತಂಗಿಯಾದ 2 ನೇ ಪ್ರತಿವಾದಿಗೆ ಸದರಿ ಆಸ್ತಿಗಳನ್ನು ಕೊಡಿಸಿದ ಕಾರಣ ನಾನು ಅದರಲ್ಲಿ ಹಿಸ್ಸೆ ಕೇಳುತ್ತಿದ್ದೇನೆ. ನನ್ನ ಅಜ್ಜಿ ಕ್ರಯಕ್ಕೆ ಕೊಡಿಸಿದ್ದಾರೆ. ಅದಕ್ಕೆ ಸಂಬಂಧಿಸಿದ ಯಾವುದೇ ದಾಖಲೆ ಇಲ್ಲ.

ಈ ಹಂತದಲ್ಲಿ ವಕೀಲರ ವಿನಂತಿ ಮೇರೆಗೆ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ